ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ-72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ:

ಪ್ರಶ್ನೆ:

**ಕರ್ನಾಟಕ ಗೇರು ಅಭಿವೃದ್ಧಿ ನಿಗಮವನ್ನು ಅರಣ್ಯ ಇಲಾಖೆಯ ಇತರ ನಿಗಮಗಳೊಂದಿಗೆ ವಿಲೀನಗೊಳಿಸಬೇಕೆಂಬ ಪ್ರಸ್ತಾವನೆಯು ರಾಜ್ಯದ ಗೇರು ಕೃಷಿಕರ ಅಭಿವೃದ್ಧಿಗೆ ಮಾರಕವಾಗಿದ್ದು, ಗೇರು ಅಭಿವೃದ್ಧಿ ನಿಗಮವು ಗೇರು ಕೃಷಿಕರಿಗೆ ಅನಿವಾರ್ಯವಾಗಿರುತ್ತದೆ. ಈ ನಿಗಮಕ್ಕೆ ಹೆಚ್ಚುವರಿ ಅನುದಾನ ಒದಗಿಸಿ ಗೇರು ಅಭಿವೃದ್ಧಿ ನಿಗಮವನ್ನು ಬಲಪಡಿಸುವುದರಿಂದ ಗೇರು ಕೃಷಿಕರಿಗೆ ಹೆಚ್ಚಿನ ಬೆಂಬಲವಾಗುವ ಗಂಭೀರ ವಿಷಯದ ಕುರಿತು.**

**ಹೇಳಿಕೆ:**

ಕರ್ನಾಟಕ ಗೇರು ಅಭಿವೃದ್ಧಿ ನಿಗಮವು ದಿನಾಂಕ:14.02.1978ರಂದು ಕಂಪೆನಿ ಕಾಯ್ದೆಯನ್ವಯ ಸ್ಥಾಪಿಸಲ್ಪಟ್ಟಿದ್ದು, ಅರಣ್ಯ ಇಲಾಖೆಯಿಂದ ಪಡೆದ ಗೇರು ನೆಡುತೋಪುಗಳ ಉಸ್ತುವಾರಿ ಹಾಗೂ ಕರ್ನಾಟಕದಲ್ಲಿ ಗೇರು ಕೃಷಿಯ ವಿಸ್ತರಣೆಯ ಮುಖ್ಯ ಉದ್ದೇಶದಿಂದ ಪ್ರಾರಂಭಗೊಂಡಿರುತ್ತದೆ. ನಿಗಮದ ಅಧಿಕೃತ ಬಂಡವಾಳ ರೂ.10 ಕೋಟಿಯಾಗಿದ್ದು ಸಂಚಿತ ಬಂಡವಾಳ ರೂ.759.03 ಲಕ್ಷವಾಗಿದೆ. ಇದರಲ್ಲಿ ರೂ.44 ಲಕ್ಷ ಮೊತ್ತದ 4400 ಷೇರುಗಳು ಕೇಂದ್ರ ಸರ್ಕಾರದ ಪಾಲು ಬಂಡವಾಳವಾಗಿದ್ದು, ಉಳಿದ ರೂ.715.03 ಲಕ್ಷ ಮೊತ್ತದ 71503 ಷೇರುಗಳು ರಾಜ್ಯ ಸರ್ಕಾರದ್ದಾಗಿದೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಗೇರು ಅಭಿವೃದ್ಧಿ ನಿಗಮಗಳನ್ನು ವಿಲೀನಗೊಳಿಸಿ ಕರ್ನಾಟಕ ಅರಣ್ಯ ನಿಗಮವೆಂದು ಮರು ನಾಮಕರಣಗೊಳಿಸಿ ಒಂದೇ ನಿಗಮವನ್ನಾಗಿ ಸರ್ಕಾರದ ಆದೇಶ ಸಂಖ್ಯೆ:ಅಪಜೀ 65 ಎಫ್‌ಪಿಸಿ 2021, ದಿನಾಂಕ:05.08.2022ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಕರ್ನಾಟಕ ಗೇರು ಅಭಿವೃದ್ಧ ನಿಗಮಕ್ಕೆ ರಾಜ್ಯ ಸರ್ಕಾರದಿಂದ 25,627.026 ಹೆಕ್ಟೇರ್ ಗೇರು ನೆಡುತೋಪುಗಳನ್ನು ಹಸ್ತಾಂತರ ಮಾಡಿದ್ದು ಇದರಲ್ಲಿ 12,718.836 ಹೆಕ್ಟೇರ್ ಈಕ್ವಿಟಿ ರೂಪದಲ್ಲಿ ಹಾಗೂ 12,908.19 ಹೆಕ್ಟೇರ್ ಲೀಸ್ ಸ್ವರೂಪದಲ್ಲಿರುತ್ತದೆ. ಸದರಿ ಲೀಸ್ ಅವಧಿಯು ದಿನಾಂಕ:01.04.1993 ರಿಂದ 31.03.2023ರ ಅವಧಿವರೆಗೆ ಇರುತ್ತದೆ. ಸದರಿ ಲೀಸ್ ಅವಧಿಯನ್ನು ನವೀಕರಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಪಡೆ ಮುಖ್ಯಸ್ಥರು)ರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಈ ಗೇರು ನೆಡುತೋಪುಗಳು ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಹರಡಿರುತ್ತದೆ. ಸದರಿ ಪ್ರದೇಶಗಳನ್ನು ಈ ಕೆಳಗೆ ವಿವರಿಸಿದ ಎರಡು ವಿಭಾಗಗಳಿಗೆ ಹಂಚಿಕೆ ಮಾಡಲಾಗಿದೆ.

**(ಹೆಕ್ಟೇರುಗಳಲ್ಲಿ)**

| **ವಿಭಾಗ** | **ದಕ್ಷಿಣ ಕನ್ನಡ** | **ಉಡುಪಿ** | **ಉತ್ತರ ಕನ್ನಡ** | **ಶಿವಮೊಗ್ಗ** | **ಒಟ್ಟು** |
|---|---|---|---|---|---|
| ಮಂಗಳೂರು | 9127.406 | 7403.35 | - | 2064.25 | 18,595.006 |
| ಕುಮಟಾ | - | - | 7032.02 | - | 7032.02 |
| | **9127.406** | **7403.35** | **7032.02** | **2064.25** | **25627.026** |

## 2. **ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಸಾಂಸ್ಥಿಕ ವಿವರಗಳು (Organization Setup)**

ಕರ್ನಾಟಕ ಗೇರು ಅಭಿವೃದ್ಧಿ ನಿಗಮವು ರಾಜ್ಯ ಸರ್ಕಾರದ ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಅಧೀನದಲ್ಲಿದ್ದು, ಕೇಂದ್ರ ಕಚೇರಿಯು ಮಂಗಳೂರಿನಲ್ಲಿರುತ್ತದೆ. ನಿಗಮದ ಮುಖ್ಯಸ್ಥರಾಗಿ ಅರಣ್ಯ ಇಲಾಖೆಯಿಂದ ನಿಯೋಜಿತರಾದ ಅರಣ್ಯ ಸಂರಕ್ಷಣಾಧಿಕಾರಿಯು ವ್ಯವಸ್ಥಾಪಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಾರೆ.

ಕರ್ನಾಟಕ ಗೇರು ಅಭಿವೃದ್ಧಿ ನಿಗಮವು ಮಂಗಳೂರು ಮತ್ತು ಕುಮಟಾದಲ್ಲಿ ವಿಭಾಗೀಯ ಕಛೇರಿಗಳನ್ನು ಹೊಂದಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿ ಮಟ್ಟದ ಅಧಿಕಾರಿಗಳು ವಿಭಾಗೀಯ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಾರೆ. ನಿಗಮದ ಮಂಗಳೂರು ವಿಭಾಗವು ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿದ್ದು ಮಂಗಳೂರು, ಪುತ್ತೂರು, ಮೂಡಬಿದ್ರಿ. ಕುಂದಾಪುರ, ಬೈಂದೂರು ಮತ್ತು ತೀರ್ಥಹಳ್ಳಿ ಘಟಕಗಳಾಗಿ ವಿಂಗಡಣೆ ಮಾಡಲಾಗಿರುತ್ತದೆ. ಕುಮಟಾ ವಿಭಾಗವು ಭಟ್ಕಳ, ಹೊನ್ನಾವರ, ಕುಮಟಾ ಮತ್ತು ಕಾರವಾರ ಘಟಕಗಳಾಗಿ ವಿಂಗಡಣೆ ಮಾಡಲಾಗಿರುತ್ತದೆ. ಈ ಘಟಕಗಳ ಉಸ್ತುವಾರಿಯನ್ನು ವಲಯ ಅರಣ್ಯ ಅಧಿಕಾರಿಗಳ ಸಮಾನ ಹುದ್ದೆಯಾದ ನೆಡುತೋಪು ಅಧಿಕ್ಷಕರುಗಳು ಉಸ್ತುವಾರಿ ವಹಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

ಸದರಿ ನೆಡುತೋಪು ಅಧಿಕ್ಷಕರುಗಳ ಅಧೀನದಲ್ಲಿ ಕ್ಷೇಮಾಭಿವೃದ್ಧಿ ನಿಯಮದಡಿ ನಿಯೋಜಿಸಲಾದ ಕ್ಷೇತ್ರ ಸಿಬ್ಬಂದಿಗಳು ಮತ್ತು ಹೊರಗುತ್ತಿಗೆ ಆಧಾರದಲ್ಲಿ ನಿಯೋಜಿಸಲಾದ ಕಾವಲುಗಾರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಒಟ್ಟು 280 ಹುದ್ದೆಗಳಿಗೆ ಮಂಜೂರಾತಿಯಿದ್ದು, ಪ್ರಸ್ತುತ ಈ ಮೇಲೆ ವಿವರಿಸಿದಂತೆ ಖಾಯಂ ಸಿಬ್ಬಂದಿಗಳು 16, ಕ್ಷೇಮಾಭಿವೃದ್ಧಿ ನಿಯಮದಡಿ 30 ಸಿಬ್ಬಂದಿ ಮತ್ತು ಹೊರಗುತ್ತಿಗೆ ಆಧಾರದಲ್ಲಿ 36 ಸಿಬ್ಬಂಧಿಗಳು ಹಾಗೂ ನಿಯೋಜನೆ ಮೇಲೆ 1 ಹೀಗೆ ಒಟ್ಟು 83 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ನಿಗಮದ ಎಲ್ಲಾ ಖಾಯಂ ಸಿಬ್ಬಂದಿಗಳಿಗೆ ಅನ್ವಯವಾಗುವಂತೆ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ವೃಂದ ಮತ್ತು ಸೇವಾ ನಿಯಮಾವಳಿ -1992 ಜಾರಿಯಲ್ಲಿರುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳು (KCRS) ಕಾಲ ಕಾಲಕ್ಕೆ ಬದಲಾವಣೆಗೆ ಅನ್ವಯವಾಗುತ್ತದೆ. ರಾಜ್ಯ ಸರ್ಕಾರದಿಂದ ಕಾಲ ಕಾಲಕ್ಕೆ ಮಂಜೂರಾಗುವ ವೇತನ ಶ್ರೇಣಿ, ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳು ಅನ್ವಯವಾಗುತ್ತದೆ. ಕ್ಷೇಮಾಭಿವೃದ್ಧಿ ನಿಯಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೂ ಸಹ ರಾಜ್ಯ ಸರ್ಕಾರದ ಪ್ರತ್ಯೇಕ ಆದೇಶಗಳಂತೆ ವೇತನ ಮತ್ತು ಇತರೆ ಭತ್ಯೆಗಳು ಅನ್ವಯಿಸಲ್ಪಡುತ್ತಿದೆ.

ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಆಡಳಿತ ಮಂಡಳಿಗೆ ಕೇಂದ್ರ ಸರ್ಕಾರದಿಂದ 04 ಹಾಗೂ ರಾಜ್ಯ ಸರ್ಕಾರದಿಂದ 05 ಮಂದಿಯನ್ನು ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲು ಅವಕಾಶವಿರುತ್ತದೆ.

## **3. ನಿಗಮವು ಸ್ಥಾಪಿಸಲ್ಪಟ್ಟ ಮೂಲ ಉದ್ದೇಶಗಳು:**

- ಹಳೆಯ ಗೇರು ತೋಟಗಳಲ್ಲಿ ಸತ್ತ ಗಿಡಗಳ ಬದಲಿಗೆ ಅಧಿಕ ಇಳುವರಿ ನೀಡುವ ಗೇರು ತಳಿಗಳನ್ನು ಮರು ನಾಟಿ ಮಾಡುವುದರ ಮೂಲಕ ಗೇರು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು.
- ಸಂಶೋಧನಾ ಸಂಸ್ಥೆಗಳು ಬಿಡುಗಡೆ ಮಾಡಿದ ಇತ್ತೀಚಿನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಗೇರು ತೋಟಗಳನ್ನು ನಿರ್ವಹಿಸುವುದು.
- ನಿಗಮದ ಗೇರು ತೋಟಗಳನ್ನು ಅತ್ಯುತ್ತಮ ಬಳಕೆಗಾಗಿ ಗೇರು ಕೃಷಿಯನ್ನು ಅನುಷ್ಠಾನಗೊಳಿಸುವುದು.

- ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ತ್ಯಾಜ್ಯ ಭೂಮಿಯನ್ನು ಉತ್ಪಾದಕ ಬಳಕೆಗೆ ಮರು ಸ್ಥಾಪಿಸುವುದು.
- ಗೇರು ಬೀಜ ಉಪಯೋಗದ ಬಗ್ಗೆ ಮತ್ತು ಗೇರು ಹಣ್ಣಿನ ಪ್ರಾಮುಖ್ಯತೆ ಬಗ್ಗೆ, ಗೇರು ಬೆಳೆ ಮತ್ತು ಅದರ ಇಳುವರಿ ಪ್ರಾಮುಖ್ಯತೆ, ಗೇರು ಬೆಳೆಯ ಸಾಂಸ್ಕೃತಿಕ ಆಚರಣೆಗಳ ಪ್ಯಾಕೇಜ್, ವಿವಿಧ ಬಗೆಯ ಗೇರು ಗಿಡಗಳ ಪ್ರದರ್ಶನ, ಗೇರು ಉತ್ಪಾದನೆಯ ಪ್ರಸ್ತುತ ಸನ್ನಿವೇಶಗಳನ್ನು ರೈತರಿಗೆ ಹಾಗೂ ಗೇರು ಕೃಷಿಕರಿಗೆ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

## 4. ಕಾರ್ಯ ಚಟುವಟಿಕೆಗಳು:

ನಿಗಮವು ಗೇರು ನೆಡುತೋಪುಗಳ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಕೊಂಡಿದ್ದು, ಅಧಿಕ ಇಳುವರಿ ನೀಡುವ ಕಸಿ ಗೇರು ನೆಡುತೋಪುಗಳನ್ನು ಅರಣ್ಯ ಪ್ರದೇಶಗಳಲ್ಲಿ ಬೆಳೆಸಿ ಹಾಗೂ ತನ್ನ ವಶದಲ್ಲಿರುವ ಹಳೆಯ ಗೇರು ನೆಡು ತೋಪುಗಳ ನಿರ್ವಹಣೆಯನ್ನು ಮಾಡುತ್ತಾ ಅಲ್ಲದೆ ಕೃಷಿಕರಿಗೆ ಕೃಷಿಭೂಮಿಯಲ್ಲಿ ಅಧಿಕ ಇಳುವರಿ ನೀಡುವ ಕಸಿ ಗೇರು ಗಿಡಗಳನ್ನು ಬೆಳೆಸಲು ಕಸಿ ಗೇರು ಗಿಡಗಳನ್ನು ಪೂರೈಸುತ್ತಲಿದೆ. ಪ್ರಸ್ತುತ ನಿಗಮದ ವ್ಯಾಪ್ತಿಯಲ್ಲಿ ಉತ್ತರಕನ್ನಡ ಜಿಲ್ಲೆಯಕುಮಟಾ ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಮತ್ತು ಕೆರೆವಾಸೆ ಎಂಬಲ್ಲಿ ಒಟ್ಟು 4 ಸಸ್ಯ ಕ್ಷೇತ್ರಗಳು ಇರುತ್ತವೆ. ಸದರಿ ಸಸ್ಯಕ್ಷೇತ್ರಗಳಲ್ಲಿ ವೈಜ್ಞಾನಿಕವಾಗಿ ಸಂಶೋಧನಾ ಸಂಸ್ಥೆಗಳಿಂದ ಶಿಫಾರಸ್ಸು ಮಾಡಿದ ಅಧಿಕ ಇಳುವರಿ ನೀಡುವ ಉಳ್ಳಾಲ- 1. ಉಳ್ಳಾಲ- 2. ವೆಂಗುರ್ಲ-4, ವೆಂಗುರ್ಲ-7, ಭಾಸ್ಕರ ಇತ್ಯಾದಿ ತಳಿಗಳ ಕಸಿ ಗೇರು ಗಿಡಗಳನ್ನು ಬೆಳೆಸಲಾಗುತ್ತಿದೆ. ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಚಟುವಟಿಕೆಯನ್ನು ನಿರ್ವಹಿಸುವಾಗ, ಕಾಲಕಾಲಕ್ಕೆ ವಿವಿಧ ಗೇರು ಆಧಾರಿತ ಸಂಸ್ಥೆಗಳು / ರೈತ ಸಮುದಾಯ / ಸಂಸ್ಥೆಗಳು / ಏಜೆನ್ಸಿಗಳು, ಇತ್ಯಾದಿಗಳ ನಡುವೆ ನಿಯಮಿತ ಸಂವಹನವನ್ನು ಹೊಂದಿರುವುದು ಬಹಳ ಅವಶ್ಯಕವಾಗಿರುತ್ತದೆ.

ನಿಗಮದ ಕಾರ್ಯಾಗಾರಗಳು ಸೆಮಿನಾರ್ಗಗಳು. ನಿಯತಕಾಲಿಕವಾಗಿ ನಡೆಸುತ್ತದೆ ಮತ್ತು ಗೇರು ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ತೊಡಗಿರುವ ಸಂಸ್ಥೆಗಳೊಂದಿಗೆ ಸಂವಹನ ನಡೆಸುತ್ತಿದೆ. ಮುಂದುವರಿದು ಗೇರು ಪುನಶ್ಚೇತನ ಕಾರ್ಯ ಸತ್ತ ಮರಗಳ ಮರುನಾಟಿ, (Replacement of senile C.P.) ಗ್ಯಾಪ್ ಪ್ಲಾಂಟಿಂಗ್ (Gap planting) ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಮತ್ತು ರೈತರಿಗೆ ತರಬೇತಿ ಶಿಬಿರಗಳನ್ನು ಆಯೋಜಿಸುವ ಕಾರ್ಯಚಟುವಟಿಕೆಯನ್ನು ಹೊಂದಿರುತ್ತದೆ.

ಸದರಿ ಮೇಲೆ ಹೇಳಿರುವ ಕಾಮಗಾರಿಗಳನ್ನು ಕಳೆದ ಕೆಲವು ವರ್ಷಗಳಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಮತ್ತು ರಾಷ್ಟ್ರೀಯ ತೋಟಗಾರಿಕಾ ಮಿಷನ್ ಏಜೆನ್ಸಿ (NHM) ಮತ್ತು ಕೊಕ್ಕೊ ಮತ್ತು ಗೇರು ಕೃಷಿ ಅಭಿವೃಧಿ ನಿರ್ದೇಶನಾಲಯ (DCCD) ಏಜೆನ್ಸಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ನಿಗಮದ ವಶದಲ್ಲಿರುವ ಗೇರು ನೆಡುತೋಪುಗಳನ್ನು ವೈಜ್ಞಾನಿಕವಾಗಿ ಅಭಿವೃಧಿಪಡಿಸುವ ನಿಟ್ಟಿನಲ್ಲಿ ಕಾಮಗಾರಿ ನಿರ್ವಹಿಸಲಾಗುತ್ತಿದೆ.

## 5. ನಿಗಮದ ವಾರ್ಷಿಕ ಆದಾಯ

ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಮುಖ್ಯ ವಾರ್ಷಿಕ ಅದಾಯವು ನಿಗಮದ ವ್ಯಾಪ್ತಿಯಲ್ಲಿರುವ ಗೇರು ನೆಡುತೋಪುಗಳ ಫಸಲಿನ ವಾರ್ಷಿಕ ಹರಾಜಿನಿಂದ ಬರುತ್ತದೆ. ಈ ನಿಗಮವು ವಾರ್ಷಿಕ ಗೇರು ಫಸಲಿನ ವಿಕ್ರಯವನ್ನು MSTC ಯ ಇ-ಪ್ಲಾಟ್‌ಫಾರ್ಮ್ ಮೂಲಕ ಇ-ಟೆಂಡರ್ ಕಮ್ ಇ-ಹರಾಜು ಪ್ರಕ್ರಿಯೆಯ ಮುಖಾಂತರ ನಡೆಸಲಾಗುತ್ತದೆ ತಮ್ಮ ವ್ಯಾಪ್ತಿಯಲ್ಲಿ ಬರುವ ಗೇರು ಘಟಕಗಳಿಗೆ ಆಯಾ ವಿಭಾಗಗಳಲ್ಲಿ ಮಾರಾಟವನ್ನು ನಡೆಸಲಾಗುತ್ತದೆ

ಮಾರಾಟವನ್ನು ನಡೆಸುವ ಉದ್ದೇಶಕ್ಕಾಗಿ ಎಲ್ಲಾ ತೋಟಗಳನ್ನು ಒಂದು ಅಥವಾ ಒಂದಕ್ಕಿಂತ ಹೆಚ್ಚು ತೋಟಗಳನ್ನು ಒಳಗೊಂಡಿರುವ ಮಾರಾಟ ಘಟಕಗಳಾಗಿ ವರ್ಗೀಕರಿಸಲಾಗಿದೆ. ನಿಗಮದ ಎರಡು ವಿಭಾಗಗಳಲ್ಲಿ ಒಟ್ಟು 490 ಅಂತಹ ಘಟಕಗಳನ್ನು ಮಾರಾಟ ಮಾಡಲಾಗುತ್ತದೆ. ವಿಭಾಗಗಳ ಕೇಂದ್ರ ಕಚೇರಿಗಳು: ಮಂಗಳೂರು ಮತ್ತು ಕುಮಟಾದಲ್ಲಿ ನೆಲೆಗೊಂಡಿವೆ.

ನಿಗಮದ ಮುಖ್ಯ ಆದಾಯ ಕೇವಲ ಕಚ್ಚಾ ಗೇರು ಬೀಜದ ಮಾರಾಟದಿಂದ ಬರುವುದಾಗಿರುತ್ತದೆ. ಗೇರು ಫಸಲಿನ ಮಾರಾಟವನ್ನು ಟೆಂಡರು ಮತ್ತು ಹರಾಜು ಮೂಲಕ ವಾರ್ಷಿಕವಾಗಿ ವಿಕ್ರಯಿಸಲಾಗುತ್ತಿದೆ. ಗೇರು ಫಸಲಿನ ಮಾರಾಟದಿಂದ 2024-25 ನೇ ಸಾಲಿನಲ್ಲಿ ನಿಗಮಕ್ಕೆ ರೂ.407.22 ಲಕ್ಷ ಆದಾಯ ಬಂದಿರುತ್ತದೆ.

ನಿಗಮವು 2024-25 ನೇ ಸಾಲಿನಲ್ಲಿ ರೂ.112.22 ಲಕ್ಷಗಳ ನಷ್ಟವನ್ನು ಹೊಂದಿದೆ. ಅಲ್ಲದೆ ದಿನಾಂಕ: 31.03.2025ರ ಅಂತ್ಯಕ್ಕೆ ಸಂಚಯಿತ ನಷ್ಟವು ರೂ.201.74 ಲಕ್ಷವಿರುತ್ತದೆ. ನಿಗಮದ ಎಲ್ಲಾ ಖರ್ಚುವೆಚ್ಚಗಳನ್ನು ವಾರ್ಷಿಕವಾಗಿ ಗೇರು ಮಾರಾಟದಿಂದ ಸಂಗ್ರಹಿಸುವ ಆದಾಯದಿಂದಲೇ ಭರಿಸಲಾಗುತ್ತಿದೆ.

ಕಳೆದ ಕೆಲವು ವರ್ಷಗಳಲ್ಲಿ ಗೇರು ಬೆಳೆಗಳ ಮಾರಾಟದಿಂದ ಬಂದ ಆದಾಯದಲ್ಲಿನ ಕುಸಿತಕ್ಕೆ ಕಾರಣವೆಂದರೆ ಹಳೆಯ ತೋಟಗಳು (Seedling Origin) ಟೀ ಮಾಸ್ಕಿಟೋ ಹಾಗೂ ಇತರ ಕೀಟಗಳ ಬಾದೆ, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು, ಮಾರುಕಟ್ಟೆ ದರದಲ್ಲಿ ತೀವ್ರ ಕುಂಠಿತ, ಇತ್ಯಾದಿ ಹಾಗೂ ತೀವ್ರ ಕಾರ್ಮಿಕ ಆಧಾರಿತ ಕೆಲಸವಾಗಿದ್ದರಿಂದ ಹೆಚ್ಚಿದ ಕಾರ್ಮಿಕ ದರಗಳು ಸಹ ಗುತ್ತಿಗೆದಾರರು ಕೆಲವು ತೋಟಗಳಲ್ಲಿ ಉತ್ತಮ ದರಗಳನ್ನು ನೀಡದಿರಲು ಒಂದು ಕಾರಣವಾಗಿರುತ್ತದೆ.

ಗೇರು ಬೆಳೆಯು ಒಂದು ಋತುಕಾಲಿಕ ಬೆಳೆಯಾಗಿದ್ದು ನಿಗಮಕ್ಕೆ ಮೂಲ ಆದಾಯವು ಗೇರು ಬೆಳೆಯೇ ಆಗಿರುತ್ತದೆ. ನಿಗಮದ ಆದಾಯದಲ್ಲಿ ವರ್ಷದಿಂದ ವರ್ಷಕ್ಕೆ ತುಂಬಾ ವ್ಯತ್ಯಯವು ಬರುತ್ತಿದೆ. ಅದಕ್ಕೆ ಪ್ರಮುಖ ಸಮಸ್ಯೆಯೆಂದರೆ ಕೆಲವು ಬೆಳೆಗಳು/ಪ್ರಭೇದಗಳಲ್ಲಿ ತಡವಾಗಿ ಹೂಬಿಡುವುದು ಕೆಲವೊಮ್ಮೆ ಒಂದು ಇಳುವರಿಯನ್ನು ಮಾತ್ರ ಪಡೆಯಲಾಗುತ್ತದೆ. ಹೂಬಿಡುವ ಸಮಯದಲ್ಲಿ ಭಾರೀ ಮಳೆಗೆ ಕಾರಣವಾದ ಚಂಡಮಾರುತದಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿಯು ಇಳುವರಿಯ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ.

**6. ಗೇರು ಪುನಃಶ್ಚೇತನ ಪ್ರಾಯೋಜನೆಗಳು:**

- 2024-25 ರಿಂದ 2026-27 ಅವಧಿಗೆ ಗೇರು ಪುನಃಶ್ಚೇತನ ಯೋಜನೆಯಡಿ ರೂ.7.34 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ತಯಾರಿಸಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಏಜೆನ್ಸಿ ಇವರಿಗೆ ಸಲ್ಲಿಸಲಾಗಿರುತ್ತದೆ.

- ಕೊಚ್ಚಿಯಲ್ಲಿರುವ ಗೇರು ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯ ಇವರಿಗೆ ಮಂಗಳೂರು ಹಾಗೂ ಕುಮಟಾ ವಿಭಾಗಗಳಲ್ಲಿ ಇರುವ ಗೇರು ನೆಡುತೋಪುಗಳ ಪುನಶ್ಚೇತನ ಕಾಮಗಾರಿಗಳಿಗೆ 2025-26 ರಿಂದ 206-27ರ ಅವಧಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

**ಸಂಖ್ಯೆ: ಅಪಜೀ 120 ಎಫ್‌ಪಿಸಿ 2025**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು